**GOVERNMENT OF KARNATAKA**

No.EP 180 PGC 2022

Karnataka Government Secretariat
Multi Storied Building
Bengaluru, dated 12.05.2022

**From:**

Principal Secretary to Government
Department of Primary and Secondary Education
Bengaluru

**To:**

The Commissioner,
Department of Public Instruction
Bengaluru

Sir,

NOTARY ★ VEENA. K. BENGALURU 12485 10-01-2027 ★ GOVT. OF INDIA

Subject: Regarding issuance of permission for transferring of CREAA ACADEMY FOR LEARNING, KK TOWERS from Sy. No.34/3, Site No.4, Channasandra, Uttarahalli-Kengeri Main Road, RR Nagar, Bengalur-560 061 to No.85/2, 11th "A" Cross, Balaji Layout, Vajarahalli, Behind Kodays call centre, Kanakapura Main Roud, Bangalore-560 109 which is managed by Arjun Educational Foundation (Reg.), 519, Vasantha, 1st Main Road, 1st Cross, 3rd Stage, 3rd Block, B.S.K. 3rd Stage, Bengaluru-85

Reference: Single File No: DPI-CP10C7-3(SCMC)/6/2021

* * *

With reference to the above subject, upon verification of the proposal under reference, permission was issued in respect of the said institution for transfer of building from 3rd Stage Ittamadu to Channasandra, Uttarahalli, Kengeri Main Road vide Government Letter No. ED 247 PMC 2014, dated 06.08.2014. Therefore, as per Rule 5 of Karnataka Educational Institutions (Change in the Governing Council or Change in the Location of Private Educational Institutions) Rules, 2006, permission cannot be accorded for the second time for change of location of the school from Sy. No.34/3, Site No.4, Channasandra, Uttarahalli-Kengeri Main Road, RR Nagar,

Bengalur-560 061 to No.85/2, 11[th] "A" Cross, Balaji Layout, Vajarahalli, Behind Kodays call centre, Kanakapura Main Roud, Bangalore-560 109 which is managed by Arjun Educational Foundation (Reg.), 519, Vasantha, 1[st] Main Road, 1[st] Cross, 3[rd] Stage, 3[rd] Block, B.S.K. 3[rd] Stage, Bengaluru-85.

However, the Commissioner has stated that the building where the present school is located is surrounded with commercial buildings and there is no play area for the students; Hence, the new location now proposed consists a spacious play ground with 20 Rooms and therefore, considering the case as a 'Special Case', the state government hereby accords permission under Section 41(5) of Karnataka Education Act, 1983 along with the below conditions:

**CONDITIONS:**

1. Fresh accreditation must be obtained in respect of the proposed new building as a new School.
2. This school will be considered as a new school from the present academic year.
3. Copy of the resolution of handing over and taking over of the new Management and Board of Directors should be submitted to Government.
4. School has to be registered as per the provisions of Karnataka Education Act, 1983.
5. A Board must be constituted with all the basic infrastructure.
6. All the students and staff should be continued from the transferred school.
7. Subject to the conditions in the Government Order No. ED 334 NES 2010, dated 20.10.2010, the Commissioner, Public Instructions is directed to permit change of name of the school.

NOTARY ★ VEENA. K. BENGALURU 12485 10-01-2027 GOVT. OF INDIA ★

Yours faithfully
Sd/-
**(H.S.SHIVAKUMAR)**
Under Secretary to Government
(Primary Education)
Education Department

CC:

1. Deputy Director (Administration), Department of Public Instruction
2. President, Arjun Education Foundation (Reg.) No. 519, Vasantha, 1[st] Main Road, 1[st] Cross, 3[rd] Stage, 3[rd] Block, B.S.K. 3[rd] Stage, Bengaluru-85

Translated By. [signature]
**Abhishek Gowda A. H.**
KAR - 2199/2019

ATTESTED TRUE COPY
[signature]
Veena. K. Advocate & Notary, Bengaluru
16 MAY 2022

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಪಿ 180 ಪಿಜಿಸಿ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 12-05-2022.

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ,
ಬೆಂಗಳೂರು.

**ಇವರಿಗೆ :**

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

**ಮಾನ್ಯರೆ,**

**ವಿಷಯ**: ಅರ್ಜುನ್ ಎಜುಕೇಷನಲ್ ಫೌಂಡೇಷನ್ (ರಿ), 519, ವಸಂತ, 1ನೇ ಮೈನ್, 1ನೇ ಕ್ರಾಸ್, 3ನೇ ಹಂತ, 3ನೇ ಬ್ಲಾಕ್, ಬಿ.ಎಸ್.ಕೆ,3ನೇ ಹಂತ, ಬೆಂಗಳೂರು-85 ಈ ಆಡಳಿತ ಮಂಡಳಿಯಿಂದ ನಡೆಯುತ್ತಿರುವ ಕ್ರಿಯಾ ಅಕಾಡೆಮಿ ಫಾರ್ ಲರ್ನಿಂಗ್, ಕೆ.ಕೆ.ಟಾವರ್ಸ್, ಸರ್ವೆ ನಂ.34/3 ಸೈಟ್ ನಂ.4, ಚನ್ನಸಂದ್ರ, ಉತ್ತರಹಳ್ಳಿ, ಕೆಂಗೇರಿ ಮೈನ್ ರೋಡ್, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-61 ಈ ಸ್ಥಳದಿಂದ 85/2, 11 ಎ ಕ್ರಾಸ್, ಬಾಲಾಜಿ ಲೇಔಟ್, ವಾಜರಹಳ್ಳಿ, ಕನಕಪುರ ರಸ್ತೆ, ಕೆ.ಎಸ್.ಐ.ಟಿ ನ ಕಾಲೇಜು ಹತ್ತಿರ, ಬೆಂಗಳೂರು- 560109. ಈ ಸ್ಥಳಕ್ಕೆ ಸ್ಥಳಾಂತರಿಸಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ** ಏಕ ಕಡತ ಸಂಖ್ಯೆ: DPI-CPI0C7-3(SCMC)/6/2021

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಸಂಸ್ಥೆಯು ಈ ಹಿಂದೆ ಈಗಾಗಲೇ ಸರ್ಕಾರದ ಪತ್ರ ಸಂಖ್ಯೆ: ಇಡಿ 247 ಪಿಎಂಸಿ 2014, ದಿನಾಂಕ:06-08-2014ರಲ್ಲಿ ಒಂದು ಬಾರಿಗೆ ಬನಶಂಕರಿ 3ನೇ ಹಂತದ ಇಟ್ಟುಮಡುವಿನಿಂದ ಚನ್ನಸಂದ್ರ ಉತ್ತರಹಳ್ಳಿ, ಕೆಂಗೇರಿ ಮುಖ್ಯರಸ್ತೆಗೆ ಸ್ಥಳಾಂತರಿಸಲು ಅನುಮತಿಯನ್ನು ನೀಡಲಾಗಿರುತ್ತದೆ. ಆದ್ದರಿಂದ, Karnataka Educational Institutions (Change in the Governing Council or Change in the Location of Private Educational Institutions) Rules, 2006ರ ನಿಯಮ-5ರನ್ವಯ ಸದರಿ ಶಾಲೆಯನ್ನು ನಂ.34/3, ಸೈಟ್ ನಂ.4, ಚನ್ನಸಂದ್ರ, ಉತ್ತರಹಳ್ಳಿ-ಕೆಂಗೇರಿ ಮುಖ್ಯರಸ್ತೆ ಸುಬ್ರಮಣ್ಯಪುರ, ಬೆಂಗಳೂರು ಈ ಸ್ಥಳದಿಂದ ನಂ.85/2, 11ಎ ಕ್ರಾಸ್ ಬಾಲಾಜಿ ಲೇ ಔಟ್, ವಾಜರಹಳ್ಳಿ, ಕನಕಪುರ ರೋಡ್, ಕೆ.ಎಸ್.ಐಟಿ ಕಾಲೇಜು ಹತ್ತಿರ, ಬೆಂಗಳೂರು-560109 ಇಲ್ಲಿಗೆ 2ನೇ ಬಾರಿಗೆ ಸ್ಥಳಾಂತರ ಮಾಡಲು ಅವಕಾಶವಿರುವುದಿಲ್ಲ.

ಆದರೆ, ಪ್ರಸ್ತುತ ಶಾಲೆಯಿರುವ ಕಟ್ಟಡದ ಅಕ್ಕಪಕ್ಕದಲ್ಲಿ ವಾಣಿಜ್ಯ ಕಟ್ಟಡಗಳಿರುವುದರಿಂದ ಶಾಲಾ ಮಕ್ಕಳಿಗೆ ಆಟ ಆಡಲು ಆಟದ ಮೈದಾನ ಕೊರತೆಯಿರುವ ಹಿನ್ನೆಲೆಯಲ್ಲಿ ಶಾಲಾ ಆಡಳಿತ ಮಂಡಳಿಯವರು ಆಟದ ಮೈದಾನವಿರುವ ವಿಸ್ತಾರವಾದ ಜಾಗವನ್ನು ಗುರುತಿಸಿ ಈ ಸ್ಥಳಕ್ಕೆ ಸ್ಥಳಾಂತರಗೊಳ್ಳಲು ಪ್ರಸ್ತಾಪಿಸಿದ್ದು, ಶಾಲೆಯು ಸ್ಥಳಾಂತರಗೊಳ್ಳಲು ಉದ್ದೇಶಿಸಿರುವ ಜಾಗದಲ್ಲಿ 20 ಕೊಠಡಿಗಳು, ವಿಶಾಲವಾದ ಆಟದ ಮೈದಾನ ಮತ್ತು ಸೌಲಭ್ಯವನ್ನು ಹೊಂದಿರುವುದಾಗಿ ಆಯುಕ್ತರು ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಇದೊಂದು 'ವಿಶೇಷ ಪ್ರಕರಣ'ವೆಂದು ಪರಿಗಣಿಸಿ ಸ್ಥಳಾಂತರಿಸಲು ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಕಲಂ 41(5)ರನ್ವಯ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ :

**ಷರತ್ತುಗಳು**:-

1. ಸಂಬಂಧಿಸಿದ ಸಂಸ್ಥೆ ಹೊಸ ಶಾಲೆಗೆ ಮಾನ್ಯತೆ ಕೋರುವಂತೆ ಹೊಸದಾಗಿ ಮಾನ್ಯತೆಯನ್ನು ಕೋರತಕ್ಕದ್ದು.
2. ಸದರಿ ಶಾಲೆಯನ್ನು ಪ್ರಸ್ತುತ ಸಾಲಿನಿಂದ ಹೊಸ ಶಾಲೆಯೆಂದು ಪರಿಗಣಿಸತಕ್ಕದ್ದು.
3. ಹಿಂದಿನ ಆಡಳಿತ ಮಂಡಳಿಯು ಶಾಲೆಗಳನ್ನು ಬಿಟ್ಟುಕೊಡುವ ಹಾಗೂ ಹೊಸ ಆಡಳಿತ ಮಂಡಳಿಗೆ ಹಸ್ತಾಂತರಿಸುವುದಕ್ಕೆ ಸಂಬಂದಿಸಿದಂತೆ ಆದೇಶವನ್ನು ಒಂದೇ ಆದೇಶದಲ್ಲಿ ನಮೂದಿಸಿ ಹೊರಡಿಸತಕ್ಕದ್ದು ಮತ್ತು ಇದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.
4. ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಅಡಿಯಲ್ಲಿ ರಚಿಸಲಾದ ನಿಯಮಗಳನ್ವಯ ಶಾಲೆಯನ್ನು ನೋಂದಣಿ ಮಾಡತಕ್ಕದ್ದು.
5. ನಿಯಮಗಳನ್ವಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹಸ್ತಾಂತರಗೊಳ್ಳುವ ಹೊಸ ಆಡಳಿತ ಮಂಡಳಿ ಹೊಂದಿರತಕ್ಕದ್ದು.
6. ಆಡಳಿತ ಮಂಡಳಿಯು ಪ್ರಸ್ತುತ ಶಾಲೆಯನ್ನು ಪುನ: ಬೇರೆ ಆಡಳಿತ ಮಂಡಳಿಗೆ ಯಾವುದೇ ಕಾರಣಕ್ಕೂ ಹಸ್ತಾಂತರಿಸಬಾರದು.
7. ಹಸ್ತಾಂತರಗೊಂಡ ಶಾಲೆಯಲ್ಲಿನ ವಿದ್ಯಾರ್ಥಿ ಹಾಗೂ ಸಿಬ್ಬಂದಿಯವರನ್ನೇ ಹೊಸ ಆಡಳಿತ ಮಂಡಳಿಯು ಮುಂದುವರಿಸಿಕೊಂಡು ಹೋಗತಕ್ಕದ್ದು.
8. ಸರ್ಕಾರದ ಆದೇಶ ಸಂಖ್ಯೆ:ಇಡಿ 334 ಎಸ್ಇಎಸ್ 2010 ದಿನಾಂಕ:20-10-2010ರ ಷರತ್ತಿಗೊಳಪಟ್ಟು ಪ್ರಸ್ತುತ ಶಾಲೆಯ ಹೆಸರನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹಂತದಲ್ಲಿ ಬದಲಾವಣೆ ಮಾಡಿಕೊಳ್ಳುವಂತೆ ಸೂಚಿಸಿದೆ.

ತಮ್ಮ ನಂಬುಗೆಯ,

ಹೆಚ್.ಎಸ್. 12/5/2022

(ಹೆಚ್.ಎಸ್. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ.

**ಪ್ರತಿ**:-

1. ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.
2. ಅಧ್ಯಕ್ಷರು, ಅರ್ಜುನ್ ಎಜುಕೇಷನಲ್ ಫೌಂಡೇಷನ್ (ರಿ), 519, ವಸಂತ, 1ನೇ ಮೈನ್, 1ನೇ ಕ್ರಾಸ್, 3ನೇ ಹಂತ, 3ನೇ ಬ್ಲಾಕ್, ಬಿ.ಎಸ್.ಕೆ,3ನೇ ಹಂತ, ಬೆಂಗಳೂರು-85.